# ದಿನಾಂಕ: 4.8.2016ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

ಸಭೆಯಲ್ಲಿ ಹಾಜರಿದ್ದವರು :

1. ಶ್ರೀ ಡಿ.ಎನ್. ನರಸಿಂಹರಾಜು, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು
2. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು
3. ಶ್ರೀ ಶಂಕರ್ ಆರ್. ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು
4. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು
5. ಶ್ರೀ ಕೆ.ಎಂ. ಚಂದ್ರೇಗೌಡ, ರಾಜ್ಯ ಮಾಹಿತಿ ಆಯುಕ್ತರು
6. ಶ್ರೀ ಪಿ.ಜಿ. ವಿಜಯಕುಮಾರ್, ರಾಜ್ಯ ಮಾಹಿತಿ ಆಯುಕ್ತರು
7. ಡಾ। ಸುಚೇತನ ಸ್ವರೂಪ, ರಾಜ್ಯ ಮಾಹಿತಿ ಆಯುಕ್ತರು
8. ಶ್ರೀ ಜಿ.ಸಿ. ವೃಷಭೇಂದ್ರಮೂರ್ತಿ, ಕಾರ್ಯದರ್ಶಿ

ಸಭೆಯಲ್ಲಿ ಈ ಕೆಳಕಂಡ ವಿಷಯವನ್ನು ಚರ್ಚಿಸಲಾಯಿತು.

**ಹೊರಗುತ್ತಿಗೆ ನೌಕರರಿಗೆ ಪ್ರಸ್ತುತ ಕೊಡುತ್ತಿರುವ ವೇತನ ಮತ್ತು ಇನ್ನು ಮುಂದೆ ಕೊಡಬೇಕಾದ ವೇತನ ಹೆಚ್ಚಳದ ಬಗ್ಗೆ ಹಾಗೂ ಟೆಂಡರ್ ಕರೆಯುವ ಕುರಿತು:**

ದಿನಾಂಕ: 30-6-2016ರಂದು ನಡೆದ ಆಯೋಗದ ಸಭೆಯಲ್ಲಿ ಕೆಲವೊಂದು ಹುದ್ದೆಗಳ ಕುರಿತು ಸರ್ಕಾರದಿಂದ ಘಟನೋತ್ತರ ಅನುಮೋದನೆ ಬಾರದ ಕಾರಣ ಕರ್ನಾಟಕ ಮಾಹಿತಿ ಆಯೋಗದ ಹೊರಗುತ್ತಿಗೆ ನೌಕರರ ಟೆಂಡರ್ ಅವಧಿಯನ್ನು ಮುಂದಿನ ಆದೇಶ ಆಗುವವರೆಗೂ ವಿಸ್ತರಿಸಲು ಸಭೆ ತೀರ್ಮಾನಿಸಲಾಗಿತ್ತು.

ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ.23.ಆರ್‌ಟಿಐ.2016 ದಿ: 27-7-2016ರ ಪತ್ರದಲ್ಲಿ (ಮೂಲ ಪತ್ರ ಕಡತ ಸಂಖ್ಯೆ: ಕಮಾಆ.245.ಆಡಳಿತ.2011ರಲ್ಲಿ ಲಭ್ಯವಿದೆ) ಕರ್ನಾಟಕ ಮಾಹಿತಿ ಆಯೋಗದಲ್ಲಿ ಸಹಾಯಕರ 10 ಹುದ್ದೆಗಳು, ಶೀರ್ಘಬರಹಗಾರರ 2 ಹುದ್ದೆಗಳು, ಶೀಘ್ರಲಿಪಿಗಾರರ 2 ಹುದ್ದೆಗಳು ಮತ್ತು ಬೆರಳಚ್ಚುಗಾರರ 02 ಹುದ್ದೆಗಳು ಒಟ್ಟು 16 ಹುದ್ದೆಗಳನ್ನು ನಿಯೋಜನೆ ಮೂಲಕ ನೌಕರರು ಲಭ್ಯವಾಗದ ಕಾರಣ, ಆಡಳಿತಾತ್ಮಕ ಹಿತದೃಷ್ಟಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿರುವುದಕ್ಕೆ ಘಟನೋತ್ತರ ಅನುಮತಿ ನೀಡಿದೆಯೆಂದು ಮತ್ತು ಆಯೋಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವುದನ್ನೇ ಮುಂದುವರೆಸುವಂತೆ ತಿಳಿಸಲಾಗಿರುವುದರಿಂದ, ಇ.ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಾಗಿರುತ್ತದೆ. ಈಗಾಗಲೇ ಆಯೋಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ವೇತನಗಳ ವಿವರ ಕೆಳಕಂಡಂತಿರುತ್ತದೆ.

| Post | No.of Post | Monthly for each post | Monthly for total posts |
|---|---|---|---|
| J.W. | 14 | 14459 | 202426 |
| Steno | 07 | 11678 | 81746 |
| Assistant | 09 | 11505 | 103545 |
| D.E.O. | 12 | 10793 | 129516 |
| Typist | 07 | 10793 | 75551 |
| Driver | 04 | 8409 | 33636 |
| Dalayat | 20 | 7828 | 156560 |
| Home Orderly | 02 | 7816 | 15632 |
| Security | 04 | 7931 | 31724 |
| Total | | | 830336 |

ಕರ್ನಾಟಕ ಮಾಹಿತಿ ಆಯೋಗದಲ್ಲಿ ಮುಖ್ಯ ಮಾಹಿತಿ ಆಯುಕ್ತರನ್ನು ಒಳಗೊಂಡಂತೆ ಒಟ್ಟು ಏಳು ಆಯುಕ್ತರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಸದರಿ ಆಯುಕ್ತರುಗಳು ನ್ಯಾಯಾಲಯ ವಿಚಾರಣೆಗಳನ್ನು ಪ್ರತಿದಿನ ಬೆಳಿಗ್ಗೆ ಮತ್ತು ಮಧ್ಯಾಹ್ನ ನಡೆಸುತ್ತಾರೆ. ಪ್ರಸ್ತುತ, ಆಯೋಗದಲ್ಲಿ 30,000ಕ್ಕಿಂತ ಹೆಚ್ಚಿಗೆ ಪ್ರಕರಣಗಳು ವಿಚಾರಣೆಗೆ ಬಾಕಿಯಿದ್ದು, ಕೆಲಸಕಾರ್ಯದ ಒತ್ತಡ ಹೆಚ್ಚಾಗಿರುವುದರಿಂದ ಪ್ರಕರಣಗಳ ವಿಲೇವಾರಿ ಪ್ರಮಾಣ ಹೆಚ್ಚು ಮಾಡಬೇಕಿರುತ್ತದೆ. ಹೊರಗುತ್ತಿಗೆ ಆಧಾರದ ಮೇರೆಗೆ ತುಂಬಲಾದ ಸಿಬ್ಬಂದಿಗಳಿಗೆ ಕೆಲಸಕಾರ್ಯಗಳ ಅನುಭವದ ಕೊರತೆಯಿರುವುದರಿಂದ, ನ್ಯಾಯಾಲಯದ ದಿನನಿತ್ಯದ ಕೆಲಸಕಾರ್ಯಗಳನ್ನು ಶೀಘ್ರವಾಗಿ ಹಾಗೂ ಸುಗಮವಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಆಯೋಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ನೀಡುತ್ತಿರುವ ವೇತನ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಮತ್ತು ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರುಗಳ ವೇತನಗಳಿಗೆ ಹೋಲಿಸಿದಲ್ಲಿ ಆಯೋಗದಲ್ಲಿ ನೀಡಲಾಗುತ್ತಿರುವ ವೇತನ ಕಡಿಮೆಯಿರುತ್ತದೆ. ಆಯೋಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ವೇತನ ಹೆಚ್ಚಿಸಿದಲ್ಲಿ ನುರಿತ ಮತ್ತು ಅನುಭವಿ ಸಿಬ್ಬಂದಿಗಳು ಲಭ್ಯವಾಗುವ ಸಾಧ್ಯತೆಗಳಿವೆ. ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ತೀರ್ಪುಬರಹಗಾರರು, ಶೀಘ್ರಲಿಪಿಗಾರರು ಮತ್ತು ಸಹಾಯಕರುಗಳಿಗೆ ನಿಗಧಿಪಡಿಸಿದ ವೇತನವನ್ನೇ ಕರ್ನಾಟಕ ಮಾಹಿತಿ ಆಯೋಗದಲ್ಲಿನ ತೀರ್ಪುಬರಹಗಾರರು, ಶೀಘ್ರಲಿಪಿಗಾರರು ಮತ್ತು ಸಹಾಯಕರುಗಳ ಹುದ್ದೆಗಳಿಗೆ ನಿಗಧಿಪಡಿಸಬಹುದಾಗಿದೆ. ಕರ್ನಾಟಕ ಮಾಹಿತಿ ಆಯೋಗದಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ ಡಿ.ಇ.ಒ., ಬೆರಳಚ್ಚುಗಾರರು, ದಲಾಯತ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೂ ಹೆಚ್ಚಿನ ಕಾರ್ಯನಿರ್ವಹಣೆ ಆಗುವುದರಿಂದ, ಈ ಹುದ್ದೆಗಳಿಗೆ ಕೆಳಕಂಡಂತೆ ವೇತನವನ್ನು ನಿಗಧಿಗೊಳಿಸಬಹುದಾಗಿದೆ.

| Post | No.of Post | Monthly for each post | Monthly for total posts |
|---|---|---|---|
| J.W. | 14 | 20000 | 280000 |
| Steno | 07 | 16000 | 112000 |
| Assistant | 09 | 16000 | 144000 |
| D.E.O. | 12 | 15000 | 180000 |
| Typist | 07 | 15000 | 105000 |
| Driver | 04 | 11600 | 46400 |
| Dalayat | 20 | 10154 | 203080 |
| Home Orderly | 02 | 10138 | 20276 |
| Security | 04 | 10286 | 41144 |
| Total | | | 1131900 |
| Extra Budget per month | | | 301564 |
| Extra Budget per annum | | | 3618768 |

ಈ ರೀತಿ ಹೆಚ್ಚುವರಿ ವೇತನವನ್ನು ದಿ: 1-10-2016ರಿಂದ ನಿಗಧಿಪಡಿಸುವುದರಿಂದ, ಪ್ರತಿ ತಿಂಗಳು ರೂ.3,01,564/-ನ್ನು ಹೆಚ್ಚುವರಿಯಾಗಿ ನೀಡಬೇಕಾಗಿದ್ದು, ಇದಕ್ಕೆ ಪ್ರಸ್ತುತ 2016-17ನೇ ಹಣಕಾಸಿನ ಸಾಲಿನಲ್ಲಿ ಅಕ್ಟೋಬರ್ 2016 ರಿಂದ ಫೆಬ್ರವರಿ 2017ನೇ ಮಾಹೆ ಅಂದರೆ ಒಟ್ಟು ಐದು ತಿಂಗಳುಗಳಿಗೆ ರೂ.3,01,564 x 5 = **15,07,820/-** ಆಗುತ್ತದೆ.

ಸರ್ಕಾರದ ಕಾರ್ಮಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಕಾಇ.173.ಎಲ್‌ಎಂಡಬ್ಲ್ಯು.06 ದಿನಾಂಕ: 30-4-2007ರಲ್ಲಿ ಹೊರಗುತ್ತಿಗೆ ನೌಕರರ ವೇತನವನ್ನು ನಿಗಧಿಪಡಿಸುವಾಗ ಸದರಿ ಸುತ್ತೋಲೆಯಲ್ಲಿ ತಿಳಿಸಿದ ವಿಧಿವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಅದರ ಪ್ರಕಾರ ಲೆಕ್ಕಾಚಾರ ಮಾಡಿ ಸಿದ್ದಪಡಿಸಿರುವ ಪಟ್ಟಿಯ ತ:ಖ್ತೆಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಮೇಲ್ಕಂಡಂತೆ ಹೊರಗುತ್ತಿಗೆ ನೌಕರರಿಗೆ ವೇತನವನ್ನು ನಿಗಧಿಗೊಳಿಸಲು ಹಾಗೂ ಇ.ಟೆಂಡರ್ ಕರೆಯಲು ಕಾರ್ಯದರ್ಶಿಯವರು ಸಭೆಯಲ್ಲಿ ಅನುಮೋದನೆಗಾಗಿ ಕೋರಿದರು.

ವೇತನ ಹೆಚ್ಚಳದ ಪ್ರಸ್ತಾವನೆಯನ್ನು ಸಭೆಯಲ್ಲಿ ಪರಾಮರ್ಶಿಸಿದ ಸಂದರ್ಭದಲ್ಲಿ ಈಗಿನ ಮಾರುಕಟ್ಟೆ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ವಾಹನ ಚಾಲಕರ ಹುದ್ದೆಗೆ ಒಟ್ಟು ವೇತನ ರೂ.12,000/- ಮತ್ತು ದಲಾಯತ್ ಹುದ್ದೆಗೆ ರೂ.11,000/-ಗಳನ್ನು ನಿಗಧಿಪಡಿಸಲು ತೀರ್ಮಾನಿಸಿದಂತೆ ವಿವಿಧ ಹುದ್ದೆಗಳಿಗೆ ನೀಡಬೇಕಾದ ವೇತನದ ವಿವರಗಳು ಕೆಳಕಂಡಂತೆ ಇರುತ್ತದೆ.

| | | | | | | | | | | Deduction | | | | | | |
|---|---|---|---|---|---|---|---|---|---|---|---|---|---|---|---|---|
| | | | | | | | | | | Employee | | Employer | | | | |
| Sl No | post | No of post | basic | VDA | other allow | Employer contribution of PF 13.61 % | salary | Employer contribution of ESI 4.75% | Gross Proposed | PF 12% | ESI 1.75 % | PF 13.61 % | ESI 4.75 % | PT | Total Deduction | Take home Pay(Nett) |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 1 | J.W. | 14 | 4732 | 4513.5 | 8589 | 1258 | 19093 | 907 | 20000 | 1109 | 334 | 1258 | 907 | 200 | 3808 | 16192 |
| 2 | Steno | 7 | 4732 | 4513.5 | 4771 | 1258 | 15274 | 726 | 16000 | 1109 | 267 | 1258 | 725 | 200 | 3559 | 12441 |
| 3 | Asst. | 9 | 4569 | 4513.5 | 4956 | 1236 | 15274 | 726 | 16000 | 1190 | 267 | 1236 | 725 | 200 | 3618 | 12382 |
| 4 | DEO | 12 | 4569 | 4513.5 | 4001 | 1236 | 14320 | 680 | 15000 | 1190 | 251 | 1236 | 680 | 0 | 3357 | 11643 |
| 5 | Typist | 7 | 4569 | 4513.5 | 4001 | 1236 | 14320 | 680 | 15000 | 1190 | 251 | 1236 | 680 | 0 | 3357 | 11643 |
| 6 | Driver | 4 | 4569 | 4513.5 | 1137 | 1236 | 11455 | 545 | 12000 | 1190 | 200 | 1236 | 544 | 0 | 3170 | 8830 |
| 7 | Dalayat | 20 | 3734 | 4513.5 | 1131 | 1123 | 10501 | 499 | 11000 | 990 | 184 | 1122 | 499 | 0 | 2795 | 8205 |
| 8 | Home ordely | 2 | 3734 | 4513.5 | 308 | 1122 | 9677 | 460 | 10137 | 990 | 169 | 1122 | 460 | 0 | 2741 | 7396 |
| 9 | Security | 4 | 3755 | 4513.5 | 426 | 1125 | 9819 | 466 | 10285 | 992 | 172 | 1125 | 466 | 0 | 2755 | 7530 |

ಮೇಲ್ಕಂಡ ಹುದ್ದೆಗಳಿಗೆ ತೋರಿಸಿದಂತೆ ವೇತನ ನಿಗದಿಪಡಿಸಿ ಇ.ಟೆಂಡರ್ ಕರೆಯಲು ಹಿಂದಿನಂತೆಯೇ ವಿಧಿ–ವಿಧಾನಗಳನ್ನು ಅನುಸರಿಸಿ ಇತ್ಯರ್ಥ ಮಾಡಲು ಆಯೋಗದ ಸಭೆಯಲ್ಲಿ ಒಮ್ಮತದಿಂದ ತೀರ್ಮಾನಿಸಲಾಯಿತು.

ಕ್ರಮ: ಕಾರ್ಯದರ್ಶಿ

7ನೇ ಉನ್ನತಮಟ್ಟದ ಸಭೆಯಲ್ಲಿ ಚರ್ಚಿಸಬಹುದಾದಂತಹ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದಾದರು ಅಂಶಗಳಿದ್ದಲ್ಲಿ ಇನ್ನೆರಡು ದಿವಸಗಳಲ್ಲಿ ಕಾರ್ಯದರ್ಶಿಯವರಿಗೆ ನೀಡಬೇಕೆಂದು ತಿಳಿಸಲಾಯಿತು.

ಕ್ರಮ: ಕಾರ್ಯದರ್ಶಿ

ಆಯೋಗದ ನ್ಯಾಯಾಲಯ ಹಾಗೂ ಪಿ.ಐ.ಓ. ಶಾಖೆಯಲ್ಲಿ ದಲಾಯತ್‌ಗಳ ಕರ್ತವ್ಯದ ಒತ್ತಡಗಳು ಅತ್ಯಂತ ಹೆಚ್ಚಾಗಿರುವುದರಿಂದ, ಕಾಲಕಾಲಕ್ಕೆ ನಿಯಮಿತವಾಗಿ ಆಯೋಗದ ಆದೇಶಗಳನ್ನು, ಸೂಚನೆಗಳನ್ನು ಮೇಲ್ಮನವಿದಾರರು, ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ಪ್ರಥಮ ಮೇಲ್ಮನವಿ ಪ್ರಾಧಿಕಾರಿಗಳಿಗೆ ಕಳುಹಿಸುವ ಅವಶ್ಯಕತೆ ಹೆಚ್ಚಾಗಿದ್ದು, ಇದನ್ನು ಮನಗಂಡ ಆಯೋಗವು ಅತೀ ತುರ್ತಾಗಿ ಒಟ್ಟು 07 ದಲಾಯತ್ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇಮಿಸಿಕೊಂಡು ಯಾವುದೇ ಕಾರ್ಯಗಳು ಕುಂಠಿತವಾಗದಂತೆ ಕ್ರಮ ಕೈಗೊಳ್ಳಲು ಮತ್ತು ಈ ಹುದ್ದೆಗಳನ್ನು ಸೃಜಿಸಲು ಹಾಗೂ ತೆಗೆದುಕೊಂಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲು ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಲು ಆಯೋಗದ ಸಭೆಯಲ್ಲಿ ಒಮ್ಮತದಿಂದ ತೀರ್ಮಾನಿಸಲಾಯಿತು.

ಕ್ರಮ: ಕಾರ್ಯದರ್ಶಿ

8/2/2016

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.